


ಧೈರ್ಯವಾಗಿ ಘೋಷಿಸಿದಳು. ಅಷ್ಟೇ ಅಲ್ಲ, ಶ್ರೀರಾಮಕೃಷ್ಣರು ತಮ್ಮ ಧರ್ಮಪತ್ನಿಯನ್ನೇ ಜಗಜ್ಜನನಿಯ ರೂಪದಲ್ಲಿ ಪೂಜಿಸಿ, ಇಡೀ ಸ್ತ್ರೀಜಾತಿಗೇ ಉತ್ಕೃಷ್ಟವಾದ ಮಾತೃಸ್ಥಾನವನ್ನೇ ನೀಡಿದ್ದಾರೆ. ವಿಶ್ವಮಾತೃಶಕ್ತಿಯ ಕುಂಡಲಿನಿಯನ್ನೇ ಜಾಗೃತಗೊಳಿಸಿ, ಜಗತ್ತಿನ ಉದ್ಧಾರಕ್ಕಾಗಿ ಶ್ರೀಮಾತೆಯವರನ್ನು 'ಷೋಡಶೀ' ಪೂಜೆಯ ಮೂಲಕ ತಮ್ಮ ಲೀಲಾ ಸಹಾಯಕರನ್ನಾಗಿ ಮಾಡಿಕೊಂಡ ಈ ಘಟನೆಯಂತೂ ಮಾನವ ಇತಿಹಾಸದಲ್ಲೇ ಅದ್ವಿತೀಯವಾದದ್ದು.

## ಸಮ್ಮಿಲನದ ಸೇತುವೆ

ಶ್ರೀಮಾತೆಯವರ ಸಂಬಂಧವಾಗಿ ಸೋದರಿ ನಿವೇದಿತಾ ಹೇಳಿದ ಉಕ್ತಿ ಉಲ್ಲೇಖಾರ್ಹವಾಗಿದೆ: "ಶ್ರೀರಾಮಕೃಷ್ಣರು ಭಾರತೀಯ ನಾರಿಯರ ಆದರ್ಶದ ವಿಷಯವಾಗಿ ಹೇಳಿರುವ ಕೊನೆಯ ಮಾತು ಶ್ರೀಶಾರದಾದೇವಿ." ಸನಾತನ ಹಾಗೂ ನವಯುಗಗಳ ಶ್ರೇಷ್ಠ ನಾರಿಯರ ಆದರ್ಶಗಳ ಸೇತುವೆ ಅಥವಾ ಅವುಗಳ ಸಮ್ಮಿಲನದಂತಿದೆ ಶ್ರೀಮಾತೆಯವರ ಅಪೂರ್ವ ವ್ಯಕ್ತಿತ್ವ. ಸನಾತನ ಭಾರತದ ಆಧ್ಯಾತ್ಮಿಕ ತಳಹದಿಯುಳ್ಳ ಆದರ್ಶ ನಾರಿಯರ ಸಕಲ ಗುಣಸಂಪನ್ನತೆಯ ಜೊತೆಗೆ, ಆಧುನಿಕ ನಾರಿಯರಲ್ಲಿ ಇರಬೇಕಾದ ಪವಿತ್ರತೆ, ಪ್ರಶಾಂತತೆ, ವಿಜ್ಞಾನಸಮ್ಮತವಾದ ಬುದ್ಧಿಮತ್ತತೆ, ವ್ಯವಹಾರ ಕುಶಲತೆ, ಕ್ಷಮಾಶೀಲತೆ, ಮನೋವೈಶಾಲ್ಯ, ಸಮಯ–ಪರಿಸ್ಥಿತಿ–ವ್ಯಕ್ತಿಗಳಿಗೆ ತಕ್ಕಂತೆ ಹೊಂದಿಕೊಂಡು ನಡೆಯುವ ಸ್ವಭಾವ – ಇವುಗಳ ಒಟ್ಟು ಮೊತ್ತವನ್ನೇ ನಾವು ಶ್ರೀಮಾತೆಯವರ ವ್ಯಕ್ತಿತ್ವದಲ್ಲಿ ಕಾಣುತ್ತೇವೆ.

ಸನಾತನ ಭಾರತದ ಆದರ್ಶ ನಾರಿಯಲ್ಲಿದ್ದ ಅನೇಕ ಗುಣಗಳ ಸಮಷ್ಟಿಯೇ ಮಾತೃತ್ವ ಮತ್ತು ಸತೀತ್ವ. ಶ್ರೀಮಾತೆಯವರ ವ್ಯಕ್ತಿತ್ವದಲ್ಲಿ ಈ ಗುಣಗಳು ಅತಿ ಚಿಕ್ಕ ವಯಸ್ಸಿನಲ್ಲಿಯೇ ವಿಕಸಿತವಾಗಿದ್ದವು. ಐದು ವರ್ಷದ ಬಾಲಿಕೆ ಶಾರದಾ ಇಪ್ಪತ್ತಮೂರು ವರ್ಷ ವಯಸ್ಸಿನ ಶ್ರೀರಾಮಕೃಷ್ಣರ ಸಹಧರ್ಮಿಣಿಯಾದಳು. ವಿವಾಹವಾಗಿ ಎರಡು ವರ್ಷಗಳ ನಂತರ ಶ್ರೀರಾಮಕೃಷ್ಣರು ಒಮ್ಮೆ ಮಾವನ ಮನೆಗೆ ಬಂದಿದ್ದಾರೆ. ಏಳು ವರ್ಷದ ಶಾರದೆ ತನ್ನ ಪತಿ ಮನೆಗೆ ಬಂದಿರುವುದನ್ನು ಕಂಡು, ಗುರುಹಿರಿಯರು ಹೇಳಿಕೊಡುವ ಮೊದಲೇ, ಪತಿಯ ಪಾದಗಳನ್ನು ಭಕ್ತಿಯಿಂದ ತೊಳೆದು ತನ್ನ ಸೆರಗಿನಿಂದ ಪಾದಗಳನ್ನು ಒರೆಸಿ, ಪತಿಯನ್ನು ಪರಮಾದರದಿಂದ ಪೂಜಿಸುತ್ತಾಳೆ. ಇದನ್ನು ನೋಡಿದ ಬಂಧುಗಳು ಸ್ತಂಭೀಭೂತರಾದರು. ಇನ್ನು ಕೆಲವರು ಹಾಸ್ಯ ಮಾಡತೊಡಗಿದರು.

**ಶ್ರೀರಾಮಕೃಷ್ಣರೇ ನಮಗೆ ಆಧಾರ; ಅವರೇ ನಮ್ಮ ಆದರ್ಶ. ಎಂತಹ ಪರಿಸ್ಥಿತಿಯಲ್ಲಿಯೂ ಅವರನ್ನು ಬಲವಾಗಿ ಹಿಡಿದುಕೋ. ನೀನೆಂದೂ ತಪ್ಪು ಹೆಜ್ಜೆ ಇಡುವುದಿಲ್ಲ.**

*–ಶ್ರೀಶಾರದಾದೇವಿ*

ಅನಂತರ ದಕ್ಷಿಣೇಶ್ವರಕ್ಕೆ ಹಿಂದಿರುಗಿ ಹೋದ ಶ್ರೀರಾಮಕೃಷ್ಣರು ಶ್ರೀಭವತಾರಿಣಿಯ ಧ್ಯಾನದಲ್ಲೇ ತಲ್ಲೀನರಾದರು. ಇತ್ತ ಶಾರದೆಯು ದೊಡ್ಡವಳಾಗುತ್ತಿದ್ದಾಳೆ. ಹೀಗಿರುವಾಗ ಶ್ರೀರಾಮಕೃಷ್ಣರ ಭಗವದುನ್ಮಾದದ ಸಹಜ ಅವಸ್ಥೆಯನ್ನು ಅರ್ಥಮಾಡಿಕೊಳ್ಳಲಾರದ ಸಾಧಾರಣ ಜನರು ಅವರು ಹುಚ್ಚರಾಗಿದ್ದಾರೆಂದು ಪರಿಹಾಸ್ಯ ಮಾಡುತ್ತಿದ್ದರು. ಜನರ ಈ ಮಾತುಗಳನ್ನು ಕೇಳಿ ಶಾರದೆಗೆ ತುಂಬಾ ಸಂಕಟವಾಯಿತು. ಅವರ ಈ ದುಃಖ ತಮ್ಮ ಸ್ವಾರ್ಥಕ್ಕಾಗಿರಲಿಲ್ಲ. ಪತಿಯ ಸೇವೆಗೆ ಅವರ ಬಳಿ ಯಾರೂ ಇಲ್ಲವಲ್ಲಾ ಎಂಬ ಕಳಕಳಿಯಿಂದ ಆ ದುಃಖ ಮೂಡಿತ್ತು. ಒಂದುವೇಳೆ ತನ್ನ ಪತಿ ಹುಚ್ಚರಾಗಿರುವುದು ಸತ್ಯವೇ ಆದರೂ, ಈ ಸಂದರ್ಭದಲ್ಲಿ ಪತಿಸೇವೆಯೇ ತನ್ನ ಪ್ರಧಾನ ಕರ್ತವ್ಯವೆಂದು ಮನಗಂಡು, ಅವರು ತಂದೆಯೊಂದಿಗೆ ದಕ್ಷಿಣೇಶ್ವರಕ್ಕೆ ಹೊರಟರು. ಅಲ್ಲಿಗೆ ಬಂದು ಸೇರಿದಾಗ ಶ್ರೀರಾಮಕೃಷ್ಣರು ಅವರನ್ನು ಗೌರವದಿಂದ ಬರಮಾಡಿಕೊಂಡರು. ಶ್ರೀರಾಮಕೃಷ್ಣರ ಸಹಜ ಅವಸ್ಥೆಯನ್ನು ಕಣ್ಣಾರೆ ಕಂಡ ಶ್ರೀಮಾತೆಯವರ ಮನಸ್ಸಿನ ದುಗುಡವೆಲ್ಲಾ ಮಾಯವಾಯಿತು.

ಹೀಗೆ ದಕ್ಷಿಣೇಶ್ವರಕ್ಕೆ ಬಂದ ಕೆಲವು ದಿನಗಳ ನಂತರ, ಒಂದು ದಿನ ಶ್ರೀರಾಮಕೃಷ್ಣರು ಶ್ರೀಮಾತೆಯವರನ್ನು ಕುರಿತು, "ನೀನು ನನ್ನನ್ನು ಸಂಸಾರಬಂಧನಕ್ಕೆ ಎಳೆಯಲು ಬಂದಿರುವೆಯಾ?" ಎಂದು ಪ್ರಶ್ನಿಸಿದರು. ಅದಕ್ಕೆ ಶ್ರೀಮಾತೆಯವರ ಸಹಜ ಉತ್ತರ ಹೀಗಿತ್ತು: "ನಾನೇಕೆ ನಿಮ್ಮನ್ನು ಸಂಸಾರಬಂಧನಕ್ಕೆ ಎಳೆಯಲಿ? ನಾನು ನಿಮ್ಮ ಧರ್ಮಪಥದಲ್ಲಿ ಸಹಾಯ ಮಾಡುವುದಕ್ಕೆ ಬಂದಿರುವೆ." ಶ್ರೀಮಾತೆಯವರ ಈ ಮಾತುಗಳು ಪತಿಯನ್ನು ಸಂತೋಷಗೊಳಿಸುವುದಕ್ಕಾಗಿ ಹೇಳಿದ ಬರೀ ಬಾಯಿಮಾತುಗಳಾಗಿರಲಿಲ್ಲ. ಮುಂದೆ ತಮ್ಮ ಇಡೀ ಜೀವನವನ್ನು ಈ ಮಾತಿನಂತೆಯೇ ಅವರು ನಡೆದು ತೋರಿಸಿದರು. *(ಮುಂದುವರಿಯುವುದು)*



# ಶ್ರೀಮಾತೆಯವರ ರಾಮೇಶ್ವರ ಯಾತ್ರೆ

ಪ್ರವ್ರಾಜಿಕಾ ಪ್ರಜ್ಞಾಪ್ರಾಣಾ



ಚೆನ್ನೈ ಶ್ರೀರಾಮಕೃಷ್ಣ ಮಠದ ಹಳೆಯ ಕಟ್ಟಡ

**ಶ್ರೀಮಾತೆಯವರು ರಾಮೇಶ್ವರ ಯಾತ್ರೆಯ ನೆವದಲ್ಲಿ ದಕ್ಷಿಣಭಾರತಕ್ಕೆ ಬಂದು, ಇದನ್ನು ಪಾವನಗೊಳಿಸಿದರು. ಇದರ ಮನೋಜ್ಞ ವಿವರಣೆಯನ್ನು ಮಾಡಿಕೊಟ್ಟಿರುವ ಶಾರದಾ ಮಠದ ಹಿರಿಯ ಸಂನ್ಯಾಸಿನಿಯಾದ ಪೂಜ್ಯ ಮಾತಾಜಿಯವರು, ಆಸ್ಟ್ರೇಲಿಯಾದ ವೇದಾಂತ ಸೊಸೈಟಿಯಲ್ಲಿ ನಿರಂತರವಾಗಿ ೧೯ ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಈಗ ಚಿಕ್ಕಮಗಳೂರಿನಲ್ಲಿರುವ ಶ್ರೀಶಾರದಾಮಠದ ನಿರ್ವಹಣೆಯನ್ನು ನೋಡಿಕೊಳ್ಳುತ್ತಿದ್ದಾರೆ.**

ಶ್ರೀಮದ್ಭಾಗವತದಲ್ಲಿ ಬರುವ ಒಂದು ಶ್ಲೋಕ ಹೀಗಿದೆ:

**ಭವದ್ವಿಧಾ ಭಾಗವತಾಸ್ತೀರ್ಥಭೂತಾಃ ಸ್ವಯಂ ವಿಭೋ ।**
**ತೀರ್ಥೀ ಕುರ್ವಂತಿ ತೀರ್ಥಾನಿ ಸ್ವಾಂತಸ್ಥೇನ ಗದಾಭೃತಾ ॥**
(ಭಾಗವತ, ೧.೧೩.೧೦)

"ಸಾಧುಗಳು ಶುದ್ಧೀಕರಣದಲ್ಲಿ ಅತಿಶ್ರೇಷ್ಠರು. ಪವಿತ್ರಜಲ ಮುಂತಾದವುಗಳಿಂದ ಆತ್ಮಶುದ್ಧಿಗೆ ಬಹಳ ಸಮಯ ಹಿಡಿಯುವುದು. ಆದರೆ ಸಾಧುಸಂಗವು ಕ್ಷಣಮಾತ್ರದಲ್ಲಿ ಅಪವಿತ್ರತೆಯನ್ನು ಹೋಗಲಾಡಿಸುವುದು. ಈ ತೀರ್ಥಪುರುಷರು ತೀರ್ಥಸ್ಥಳಗಳನ್ನು ಪವಿತ್ರಗೊಳಿಸುವರು. ಏಕೆಂದರೆ ಅವರು ಅಲ್ಲಿಗೆ ಹೋದಾಗ ಹೃದಯದಲ್ಲಿ ಗದಾಧರನಾದ ಭಗವಂತನನ್ನೇ ಕರೆದುಕೊಂಡು ಹೋಗುವರು." ಈ ಮಾತು ಶ್ರೀಮಾತೆಯವರಂಥ ಮಹಾನ್ ವ್ಯಕ್ತಿಗಳು ಮಾಡುವ ತೀರ್ಥಯಾತ್ರೆಗೆ ಸರಿಹೊಂದುತ್ತದೆ.

ಶ್ರೀಮಾತೆಯವರ ದಕ್ಷಿಣ ಭಾರತ ಯಾತ್ರೆಯಲ್ಲಿ ಒಂದು ವಿಶೇಷ ಅಂಶವಿದೆ. ರಾಮೇಶ್ವರ ಯಾತ್ರೆಯಲ್ಲಿ ಅವರ ದೇವತ್ವದ, ಅವತಾರದ ಪ್ರಕಾಶವಾಯಿತು. ಮದ್ರಾಸ್, ಬೆಂಗಳೂರು ಮುಂತಾದ ಕಡೆ ಅವರ ಅಪೂರ್ವ ಮಾತೃತ್ವ, ಗುರುಶಕ್ತಿ, ಜೀವೋದ್ಧಾರಕ್ಕಾಗಿ ಅವರ ಅಪಾರ ಕರುಣೆ, ಕಾತರತೆ ಪ್ರಕಟವಾದುವು. ಈ ಮೂಲಕ ತಮ್ಮ ಪತಿಯೂ ಗುರುವೂ ಆದ ಭಗವಾನ್ ಶ್ರೀರಾಮಕೃಷ್ಣರ ಆದೇಶವನ್ನು ಸ್ಪಷ್ಟರೂಪದಿಂದ ಪರಿಪಾಲಿಸಿದಂತೆ ಕಾಣುತ್ತದೆ.

ಬ್ರಹ್ಮಚಾರಿ ಅಕ್ಷಯಚೈತನ್ಯರು ತಾವು ರಚಿಸಿರುವ ಪದ್ಯಗಳಲ್ಲಿ ಶ್ರೀಮಾತೆಯವರ ತೀರ್ಥಯಾತ್ರೆಯ ವೈಶಿಷ್ಟ್ಯವನ್ನು ಹೀಗೆ ಬಣ್ಣಿಸಿದ್ದಾರೆ: "ಯಾರ ಪಾದಪದ್ಮಗಳಲ್ಲಿ ಸಕಲ ತೀರ್ಥಗಳೂ ಬಂದು ಸೇರುತ್ತವೆಯೋ, ಎಲ್ಲಿ ಭಕ್ತರ ಹೃದಯಗಳೆಂಬ ದುಂಬಿಗಳು ಆನಂದದಿಂದ ಆ ಮಕರಂದವನ್ನು ಪಾನ ಮಾಡುತ್ತವೆಯೋ, ಅಂತಹ ಲೀಲಾನಾಟಕಸೂತ್ರಧಾರಿ ಭಗವಂತನೇ ಸ್ವಯಂ ತೀರ್ಥಕ್ಷೇತ್ರಗಳ ಶಕ್ತಿ, ಮಹಿಮೆ ಮತ್ತು ಪವಿತ್ರತೆಯನ್ನು ವೃದ್ಧಿಪಡಿಸುವ ಸಲುವಾಗಿ ತೀರ್ಥಯಾತ್ರೆಯನ್ನು ಕೈಗೊಳ್ಳುತ್ತಾನೆ."

೧೯೧೦ ನೇ ಡಿಸೆಂಬರ್‌ನಲ್ಲಿ ಶ್ರೀಮಾತೆಯವರು ತಮ್ಮ ಸಂಗಡಿಗರೊಂದಿಗೆ ಕೊಲ್ಕತಾದಿಂದ ಹೊರಟು, ಒರಿಸ್ಸಾದ ಕೊಠಾರ್‌ದಲ್ಲಿ ಸುಮಾರು ಎರಡು ತಿಂಗಳ ಕಾಲ ಇದ್ದರು. ಅಲ್ಲಿಂದಲೇ ನೇರವಾಗಿ ರಾಮೇಶ್ವರಕ್ಕೆ ಹೋಗುವುದೆಂದು ತಿಳಿದಾಗ, ಶ್ರೀಮಾತೆಯವರು ತುಂಬಾ ಉತ್ಸಾಹಭರಿತರಾದರು.

ಇತ್ತ ಕಡೆ ಮದ್ರಾಸ್‌ನಲ್ಲಿ ಶ್ರೀಗುರುಭಕ್ತವರೇಣ್ಯರಾದ ಸ್ವಾಮಿ ರಾಮಕೃಷ್ಣಾನಂದರ ಆನಂದೋತ್ಸಾಹಗಳಿಗೆ ಎಲ್ಲೆ ಇಲ್ಲದಾಯಿತು. ಅವರ ಪಾಲಿಗೆ ಶ್ರೀಮಾತೆ ಮತ್ತು ಶ್ರೀರಾಮಕೃಷ್ಣರು ಬೇರೆ ಬೇರೆ ಆಗಿರಲಿಲ್ಲ; ಶ್ರೀಮಾತೆ ಸಾಕ್ಷಾತ್ ಜಗಜ್ಜನನಿಯೇ ಆಗಿದ್ದರು. ಶ್ರೀಮಾತೆಯವರ ಭೇಟಿಯಿಂದ ದಕ್ಷಿಣದೇಶ ಪಾವನವಾಗಬೇಕೆಂಬ ಸ್ವಾಮಿಗಳ ಬಹಳ ಕಾಲದ ಹೃದಯದ ಆಕಾಂಕ್ಷೆ ಈಗ ನೆರವೇರುವ ಸಂದರ್ಭ ಒದಗಿಬಂದಿತ್ತು. ಹೀಗಾಗಿ ಸ್ವಾಮಿ ರಾಮಕೃಷ್ಣಾನಂದರು ತಮ್ಮ ಆರೋಗ್ಯ ಕ್ಷೀಣವಾಗಿದ್ದರೂ, ಮದ್ರಾಸಿನ ಭಕ್ತರನ್ನು ಹುರಿದುಂಬಿಸಿ, ಶ್ರೀಮಾತೆಯವರ ತೀರ್ಥಯಾತ್ರೆಯ ವ್ಯವಸ್ಥೆಗಾಗಿ ಬಹಳ ದುಡಿಯತೊಡಗಿದರು.

ಶ್ರೀಮಾತೆಯವರು ತಮ್ಮ ಸಂಗಡಿಗರಾದ ಗೊಲಾಪ್‌ಮಾ, ರಾಧಾರಾಣಿ ಮತ್ತು ಆಕೆಯ ತಾಯಿ, ರಾಮಕೃಷ್ಣ ಭಟ್, ಅವರ ತಾಯಿ ಮತ್ತು ಚಿಕ್ಕಮ್ಮ, ಕೇದಾರ್ ಬಾಬುವಿನ ತಾಯಿ, ಶುಕುಲ್ ಮಹಾರಾಜ್, ಕೃಷ್ಣಲಾಲ್ ಮಹಾರಾಜ್, ಆಶುತೋಷ್ ಮಹಾರಾಜ್, ರಾಮಲಾಲ್ ದಾ – ಹೀಗೆ ಹದಿಮೂರು ಜನ ಸಂಗಡಿಗರೊಂದಿಗೆ ೧೯೧೧ರ ಫೆಬ್ರವರಿ ೮ ರಂದು ರೈಲಿನಲ್ಲಿ ಹೊರಟು, ದಾರಿಯಲ್ಲಿ ಕಾಣಸಿಗುವ ನಿಸರ್ಗದ ಸೌಂದರ್ಯವನ್ನು ಆಸ್ವಾದಿಸುತ್ತಾ, ೧೧ನೇ ತಾರೀಖು ಮದ್ರಾಸ್ ಸ್ಟೇಷನ್ನಿಗೆ ಬಂದಿಳಿದರು. ಭಕ್ತವೃಂದವು ಆನಂದೋತ್ಸಾಹಗಳಿಂದ ಜಯಜಯಕಾರ ಮಾಡುತ್ತಾ ಅವರನ್ನು ಸ್ವಾಗತಿಸಿತು. ಶ್ರೀಮಾತೆಯವರು ಮತ್ತು ಅವರ ಸಂಗಡಿಗರಿಗಾಗಿ ಮೂರು ಕಾರುಗಳನ್ನು ಸಿದ್ಧಪಡಿಸಲಾಗಿತ್ತು. ಶ್ರೀಮಾತೆಯವರು ಕಾರಿನಲ್ಲಿ ಮೊದಲಬಾರಿ ಪ್ರಯಾಣ ಮಾಡಿದ್ದು ಇಲ್ಲಿಯೇ. ಬಿಸಿಲಿನ ಧಗೆಗೆ ಕಾರಿನ ಸೀಟು ಬಿಸಿಯಾಗಿರುವುದನ್ನು ಕಂಡು, ಶಶಿ ಮಹಾರಾಜ್ ಉದ್ವೇಗದಿಂದ, ತಮ್ಮ ಅಂಗವಸ್ತ್ರವನ್ನೇ ನೀರಿನಲ್ಲಿ ತೋಯಿಸಿ, ಮತ್ತೆ ಮತ್ತೆ ಒರೆಸಿದರು. ಅವರ ಅನನ್ಯ ಭಕ್ತಿಗೆ ಎಣೆಯೇ ಇರಲಿಲ್ಲ. ಮದ್ರಾಸ್ ಮಠದ ಎದುರಿಗೆ ಇದ್ದ ಮಹಡಿಯ ಮನೆ 'ಸುಂದರ ವಿಲಾಸ' ದಲ್ಲಿ ಶ್ರೀಮಾತೆ ಮತ್ತು ಅವರ ಸಂಗಡಿಗರ ವಾಸ್ತವ್ಯ ಹಾಗೂ ಭೋಜನವ್ಯವಸ್ಥೆಯನ್ನು ಮಾಡಲಾಗಿತ್ತು.

ದಕ್ಷಿಣ ಭಾರತದ ಪ್ರಸಿದ್ಧ ಇಂಗ್ಲಿಷ್ ಪತ್ರಿಕೆಯಾದ 'ದಿ ಹಿಂದೂ', ೧೯೧೧ರ ಫೆಬ್ರವರಿ ೧೦ರ ತನ್ನ ಸಂಚಿಕೆಯಲ್ಲಿ ಶ್ರೀಮಾತೆಯವರು ಮದ್ರಾಸ್ ನಗರಕ್ಕೆ ಆಗಮಿಸುವ ವಾರ್ತೆಯನ್ನು, ಅವರ ಸಂಕ್ಷಿಪ್ತ ಜೀವನಚರಿತ್ರೆಯೊಂದಿಗೆ, ವಿಸ್ತಾರವಾಗಿ ಪ್ರಕಟಿಸಿತ್ತು. ಅದರ ಫಲವಾಗಿ ಗುಂಪುಗುಂಪಾಗಿ ಜನರು ಶ್ರೀಮಾತೆಯವರ ದರ್ಶನಕ್ಕಾಗಿ ಆಗಮಿಸುತ್ತಿದ್ದರು; ಹೀಗಾಗಿ ಕೆಲವೊಮ್ಮೆ ಅವರನ್ನು ನಿಯಂತ್ರಿಸುವುದೇ ಕಷ್ಟವಾಗುತ್ತಿತ್ತು. ಆದರೂ ಎಲ್ಲರೂ ಅವಕಾಶ ಪಡೆದುಕೊಂಡು, ಶ್ರೀಮಾತೆಯವರ ದರ್ಶನದಿಂದ ಧನ್ಯರಾದರು.

ಆ ಸಮಯದಲ್ಲಿ ಒಮ್ಮೆ ಹತ್ತಿರದ ಶಾಲೆಯ ಹುಡುಗಿಯರು ಪಿಟೀಲುವಾದ್ಯದ ಸಮೇತ ಕೆಲವು ತಮಿಳು ಭಕ್ತಿಗೀತೆಗಳನ್ನು ಹಾಡಿ, ಶ್ರೀಮಾತೆಯವರನ್ನು ಆನಂದಗೊಳಿಸಿದರು. ಮಧ್ಯಾಹ್ನದ ವೇಳೆ ಮಾತೆಯವರನ್ನು ಮತ್ತು ಅವರ ಸಂಗಡಿಗರನ್ನು ಸುತ್ತ ಮುತ್ತಲಿನ ಕಪಾಲೀಶ್ವರ ದೇವಸ್ಥಾನ ಮತ್ತು ಪಾರ್ಥಸಾರಥಿ ದೇವಸ್ಥಾನಗಳಿಗೆ ಹಾಗೂ ಸಮುದ್ರತೀರ ಮತ್ತು ಮೀನು ಸಂಗ್ರಹಾಲಯಗಳಿಗೆ ಕುದುರೆಗಾಡಿಯಲ್ಲಿ ಹಾಗೂ ಆಗತಾನೇ ಹೊಸದಾಗಿ ಪರಿಚಯವಾಗುತ್ತಿದ್ದ ರಿಕ್ಷಾಗಳಲ್ಲಿ ಕರೆದುಕೊಂಡು ಹೋಗಲಾಯಿತು.

ಆ ಸಮಯದಲ್ಲಿ ಶ್ರೀಮಾತೆಯವರು ಉಚ್ಚಭಾವದಲ್ಲಿದ್ದರು. ಜೀವಿಗಳ ಕಲ್ಯಾಣಕ್ಕಾಗಿ ಅವರ ಹೃದಯ ಅಪಾರ ಕರುಣೆಯಿಂದ ತುಂಬಿತ್ತು. ಮದ್ರಾಸಿನ ಅನೇಕ ಭಕ್ತರು ಈ ಸಂದರ್ಭದಲ್ಲಿ ಅವರಿಂದ ಮಂತ್ರದೀಕ್ಷೆಯನ್ನು ಸ್ವೀಕರಿಸಿದರು. ಒಂದು ವೈಶಿಷ್ಟ್ಯವೇನೆಂದರೆ, ಶ್ರೀಮಾತೆಯವರು ಇತರರ ಸಹಾಯವಿಲ್ಲದೆ, ತಮಗೆ ತಮಿಳುಭಾಷೆ ಬರದಿದ್ದರೂ, ದೀಕ್ಷಾರ್ಥಿಗಳಿಗೆ ಮಂತ್ರ, ಜಪದ ವಿಧಾನ ಹಾಗೂ ಧ್ಯಾನದ ಪ್ರಕ್ರಿಯೆ – ಇವುಗಳನ್ನು ಎಲ್ಲರಿಗೂ ಅರ್ಥವಾಗುವಂತೆ ತಿಳಿಸಿಕೊಡಲು ಸಮರ್ಥರಾದರು. ಇದು ಶ್ರೀಮಾತೆಯವರ ಅಪೂರ್ವಶಕ್ತಿಯ ವೈಶಿಷ್ಟ್ಯವಿರಬಹುದು ಅಥವಾ ಭಾರತೀಯ ಆಧ್ಯಾತ್ಮಿಕ ಸಂಸ್ಕೃತಿಯ ಏಕತೆಯ ಪ್ರತೀಕವೂ ಇರಬಹುದು.


ಒಂದು ದಿನ ಮಹಿಳೆಯೊಬ್ಬಳಿಗೆ ದೀಕ್ಷೆ ನೀಡಿ, ಅವಳನ್ನು ಊಟಕ್ಕೆ ತಮ್ಮೊಡನೆಯೇ ಕೂರಿಸಿಕೊಂಡರು. ಆ ಮಹಿಳೆ ತಮಿಳಿನಲ್ಲಿಯೇ ಪ್ರಶ್ನೆ ಕೇಳುತ್ತಿದ್ದಳು. ಶ್ರೀಮಾತೆಯವರು ಬಂಗಾಳಿಯಲ್ಲಿಯೇ ಉತ್ತರಿಸುತ್ತಿದ್ದರು. ಹೀಗೆ ಅವರಿಬ್ಬರ ನಡುವೆ ಸುಮಾರು ಒಂದು ಗಂಟೆ ಸಂಭಾಷಣೆ ನಡೆಯಿತು! ಕರ್ನಾಟಕದ ಭಕ್ತರಾದ ನಾರಾಯಣ ಅಯ್ಯಂಗಾರರು ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದರು. ಇತರರು ಅದನ್ನು ಬಂಗಾಳಿಗೆ ಅನುವಾದಿಸಿ, ಶ್ರೀಮಾತೆಯವರಿಗೆ ಹೇಳುತ್ತಿದ್ದರು. ಆದರೆ ಒಮ್ಮೊಮ್ಮೆ ಅನುವಾದ ಮಾಡುವುದಕ್ಕೆ ಮುಂಚೆಯೇ ಶ್ರೀಮಾತೆಯವರು ಉತ್ತರ ಹೇಳಿಬಿಡುತ್ತಿದ್ದರು.

ಈ ಸಂದರ್ಭದಲ್ಲಿ ಶ್ರೀಮಾತೆಯವರು ಮದ್ರಾಸಿನಲ್ಲಿ ಸುಮಾರು ಒಂದು ತಿಂಗಳು ಇದ್ದರು. ಅವರ ದಿವ್ಯ ಉಪಸ್ಥಿತಿಯಲ್ಲಿ ಈ ಬಾರಿ ನಡೆದ ಭಗವಾನ್ ಶ್ರೀರಾಮಕೃಷ್ಣರ ಜನ್ಮತಿಥಿ ಮಹೋತ್ಸವವು ಸ್ವಾಮಿ ರಾಮಕೃಷ್ಣಾನಂದರಿಗೂ ಹಾಗೂ ಮತ್ತೆಲ್ಲಾ ಭಕ್ತರಿಗೂ ಅನುಪಮ ಆನಂದವನ್ನು ಉಂಟು ಮಾಡಿತು. ಆ ದಿನ ಶ್ರೀಮಾತೆಯವರು ಇಬ್ಬರು ಅದೃಷ್ಟಶಾಲಿ ಭಕ್ತರಿಗೆ ಮಂತ್ರದೀಕ್ಷೆಯಿತ್ತರು.

ಈ ಸಮಯದಲ್ಲಿ ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದು ಧನ್ಯರಾದ ಮತ್ತೊಬ್ಬ ವ್ಯಕ್ತಿಯೆಂದರೆ ಮುತ್ತುಸ್ವಾಮಿ ಅಯ್ಯರ್ ಎಂಬುವವರು. ಅವರು ಆಗ ಏಳು ವರ್ಷದ ಬಾಲಕ ಮಾತ್ರ. ಶ್ರೀಮಾತೆಯವರು ಆ ಬಾಲಕನನ್ನು ತಮ್ಮ ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ಅವನ ತಲೆಯ ಕೂದಲನ್ನು ಬಾಚಿ, ಪ್ರೀತಿಯಿಂದ ತಮ್ಮ ಸ್ವಹಸ್ತದಿಂದಲೇ ಹಣ್ಣು ಮತ್ತು ಸಿಹಿ ತಿಂಡಿಯ ಪ್ರಸಾದವನ್ನು ತಿನ್ನಿಸಿದರಂತೆ. ಧನ್ಯ ಬಾಲಕ! ಇನ್ನೂ ತುಂಬಾ ಕುತೂಹಲಕರವಾದ ವಿಷಯವೆಂದರೆ, ಶ್ರೀಮಾತೆಯವರ ಪುಣ್ಯ ಹಸ್ತಸ್ಪರ್ಶದಿಂದ ಪವಿತ್ರವಾದ ಆ ಕೂದಲನ್ನು ಅವರು ಮುಂದೆ ಕತ್ತರಿಸಲೇ ಇಲ್ಲವಂತೆ!

ಅನಂತರ ಮದ್ರಾಸ್‌ನಿಂದ ರಾಮೇಶ್ವರಕ್ಕೆ ಹೊರಟು ಶ್ರೀಮಾತೆ ಹಾಗೂ ಅವರ ಸಂಗಡಿಗರು, ಮಾರ್ಗಮಧ್ಯದಲ್ಲಿ ೧೯೧೧ರ ಮಾರ್ಚ್ ೧೧ರಂದು ಮಧುರೈಗೆ ಬಂದರು. ಸ್ವಾಮಿ ರಾಮಕೃಷ್ಣಾನಂದರೇ ಈ ಯಾತ್ರೆಯ ಮುಖ್ಯ ಮೇಲ್ವಿಚಾರಣೆಯನ್ನು ವಹಿಸಿಕೊಂಡಿದ್ದರು.

ಮಧುರೈಯಲ್ಲಿ ಶ್ರೀಮಾತೆಯವರು ತಮ್ಮ ಸಂಗಡಿಗರೊಂದಿಗೆ ದೇವಸ್ಥಾನದ ಕೊಳದಲ್ಲಿ ಸ್ನಾನಮಾಡಿ, ದೇವಿ ಮೀನಾಕ್ಷಿಯ




ದರ್ಶನ ಮಾಡಿದರು. ಈ ಭವ್ಯ ದೇವಾಲಯವು ಪ್ರಾಚೀನ ಶಿಲ್ಪಕಲಾ ಸೌಂದರ್ಯದಿಂದ ಶೋಭಿಸುತ್ತಿದೆ. ಪುರಾಣದ ಕತೆಗಳನ್ನು ಚಿತ್ರಿಸಿರುವ ಅಲ್ಲಿನ ಕಲಾಕೃತಿಗಳು ಶ್ರೀಮಾತೆಯವರ ಮನಸ್ಸಿಗೆ ಆನಂದವನ್ನುಂಟುಮಾಡಿದವು. ಅದಲ್ಲದೆ, ತಿರುಮಲ ನಾಯಕನ ಅರಮನೆ ಇತ್ಯಾದಿ ಐತಿಹಾಸಿಕ ಸ್ಥಳಗಳನ್ನು ಕೂಡ ಶ್ರೀಮಾತೆ ಸಂದರ್ಶಿಸಿದರು.

ಮಧುರೈಯಿಂದ ಎಲ್ಲರೂ ರೈಲಿನಲ್ಲಿ ಹೊರಟು ಪಾಂಬನ್ ಸೇತುವೆಯ ಮೂಲಕ ರಾಮೇಶ್ವರವನ್ನು ತಲುಪಿದಾಗ ರಾತ್ರಿ ಹನ್ನೊಂದು ಗಂಟೆಯಾಗಿತ್ತು. ಆಗ ದೇವಸ್ಥಾನದ ಬಾಗಿಲು ಮುಚ್ಚಿದ್ದರಿಂದ, ಹೊರಗಡೆಯಿಂದಲೇ ದೇವರಿಗೆ ನಮಿಸಿ, 'ವಿವೇಕಭಾಸ್ಕರಮ್' ಎಂಬ ವಸತಿಗೃಹದಲ್ಲಿ ಯಾತ್ರಿಗಳೆಲ್ಲರೂ ವಿಶ್ರಮಿಸಿದರು. ಮಾರನೆಯ ದಿನ ಬೆಳಗ್ಗೆ ಎಲ್ಲರೂ ಸ್ನಾನಮಾಡಿ ದೇವಸ್ಥಾನಕ್ಕೆ ಹೋದರು. ಇಲ್ಲಿ ರಾಮೇಶ್ವರ ದೇವಸ್ಥಾನದ ಬಗ್ಗೆ ಎರಡು ಮಾತು ಹೇಳಬೇಕಾಗಿದೆ.

ರಾಮೇಶ್ವರ ದೇವಸ್ಥಾನ ದಕ್ಷಿಣ ಭಾರತದ ಅತಿದೊಡ್ಡ ಪ್ರಾಚೀನ ದೇವಾಲಯಗಳಲ್ಲಿ ಒಂದು; ಪ್ರಸಿದ್ಧ ತೀರ್ಥಕ್ಷೇತ್ರ. ಅಲ್ಲಿನ ಮುಖ್ಯ ದೇವತೆಯಾದ ಶಿವನನ್ನು ತ್ರೇತಾಯುಗದಲ್ಲಿ ಸಾಕ್ಷಾತ್ ರಾಮಚಂದ್ರನೇ ಪೂಜಿಸಿದ್ದನೆಂಬ ನಂಬಿಕೆ ಇದೆ. ಆದ್ದರಿಂದಲೇ ಅಲ್ಲಿನ ದೇವಸನ್ನಿಧಿಯು 'ರಾಮನಾಥಸ್ವಾಮಿ' ಅಥವಾ 'ರಾಮೇಶ್ವರ' ಎಂಬ ಹೆಸರಿನಿಂದ ಪ್ರಸಿದ್ಧಿಯಾಗಿದೆ. ಅತ್ಯಂತ ವಿಶಾಲವಾದ, ಎತ್ತರವಾದ ಗೋಪುರಗಳಿಂದ ಒಡಗೂಡಿದ ಈ ದೇವಸ್ಥಾನ, ತನ್ನ ಅತ್ಯಾಕರ್ಷಕ ಪ್ರಾಚೀನ ಶಿಲ್ಪಕಲಾಕೃತಿಗಳ ಸೌಂದರ್ಯದಿಂದ ಯಾತ್ರಿಕರ ಮನಸೆಳೆಯುತ್ತದೆ. ಇತಿಹಾಸ ತಜ್ಞರಾದ ಫರ್ಗುಸನ್, "ಈ ದೇವಾಲಯವು ದ್ರಾವಿಡ ಶಿಲ್ಪಕಲೆಯ ಒಂದು ಶ್ರೇಷ್ಠ ಉದಾಹರಣೆ" ಎನ್ನುತ್ತಾರೆ.

ಇಲ್ಲಿನ ದೇವಿಯ ಹೆಸರು 'ಪರ್ವತವರ್ಧಿನಿ' ಎಂದು. ದೇವಸ್ಥಾನದ ಪ್ರವೇಶದ್ವಾರದಲ್ಲಿರುವ ೧೦೦ ಅಡಿ ಎತ್ತರದ ಗೋಪುರವನ್ನು ದರ್ಶಿಸಿ, ಮುಂದೆ ಮೂರು ಪ್ರಾಕಾರಗಳನ್ನು ದಾಟಿಹೋದರೆ ಬಲಿಪೀಠ, ಯೂಪಸ್ತಂಭ ಮತ್ತು ದೊಡ್ಡ ಆಕಾರದ ನಂದಿಯನ್ನು ಕಾಣಬಹುದು. ದೇವಸ್ಥಾನದ ಒಳಗೆ ಎರಡೂ ಕಡೆ ಇರುವ ಕಂಬಗಳಲ್ಲಿ, ರಾಜವಸ್ತ್ರಧಾರಿಗಳಾಗಿ ಕೈಮುಗಿದುಕೊಂಡಿರುವ ಕಳಿಂಗರಾಜರ ಶಿಲ್ಪಗಳನ್ನು ಕಾಣ ಬಹುದು. ಇವು ಶ್ರೀಮಾತೆಯವರ ಮನಸೆಳೆದಿದ್ದವು ಎನ್ನುವುದು ಅವರ ಸಂಭಾಷಣೆಯ ಮೂಲಕ ನಮಗೆ ತಿಳಿದುಬರುತ್ತದೆ.

ಅನಂತರ ಒಳಗೆ ಹೋದರೆ ಗರ್ಭಗುಡಿಯಲ್ಲಿ ಅರ್ಧ ಅಡಿ ಎತ್ತರದ, ಚಿನ್ನದ ತಗಡಿನಿಂದ ಮಾಡಿರುವ ಮುಖವಾಡದಿಂದ ಮುಚ್ಚಿದ ಒಂದು ಮರಳಿನ ಲಿಂಗವನ್ನು ಕಾಣುತ್ತೇವೆ. ಇದೇ ರಾಮೇಶ್ವರ ಲಿಂಗ. ಗರ್ಭಗೃಹದೊಳಗೆ ಸಾಮಾನ್ಯವಾಗಿ ಯಾರನ್ನೂ ಪ್ರವೇಶಿಸಲು ಬಿಡುವುದಿಲ್ಲ. ಆದರೆ ಆಗ ರಾಮೇಶ್ವರವು ಸ್ವಾಮಿ ವಿವೇಕಾನಂದರ ಶಿಷ್ಯನಾಗಿದ್ದ ರಾಮ ನಾಡಿನ ದೊರೆಯ ಆಧಿಪತ್ಯಕ್ಕೆ ಒಳಪಟ್ಟಿತ್ತು. ದೊರೆಯು ತನ್ನ ಗುರುಗಳ ಮಾತೆಯು ಬಂದಿರುವುದರಿಂದ, ಅವರಿಗೆ ಎಲ್ಲಾ ಸೌಲಭ್ಯಗಳನ್ನೂ ಒದಗಿಸಬೇಕೆಂದು ದೇವಸ್ಥಾನದ ಆಡಳಿತ ವರ್ಗದವರಿಗೆ ಕಟ್ಟಪ್ಪಣೆ ಮಾಡಿದ್ದನು. ಇದರಿಂದಾಗಿ ಶ್ರೀಮಾತೆ ಮತ್ತು ಅವರ ಸಂಗಡಿಗರಿಗೆ ಗರ್ಭಗುಡಿಗೆ ಪ್ರವೇಶಮಾಡಿ, ರಾಮೇಶ್ವರನ ಪೂಜೆ ಮಾಡುವ ಅಪೂರ್ವ ಅವಕಾಶ ದೊರೆಯಿತು.

ಸ್ವಾಮಿ ರಾಮಕೃಷ್ಣಾನಂದರು ಶ್ರೀಮಾತೆಯವರ ಪೂಜೆಗಾಗಿ ನೂರೆಂಟು ಚಿನ್ನದ ಬಿಲ್ವಪತ್ರೆಗಳನ್ನು ಒದಗಿಸಿದ್ದರು. ಅಲ್ಲಿದ್ದ ಮೂರು ದಿನವೂ ಶ್ರೀಮಾತೆಯವರು ತಮ್ಮ ಸಂಗಡಿಗರೊಂದಿಗೆ